ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

## ಸುತ್ತೋಲೆ

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಖಾಲಿ ಇರುವ ಎಇ, ಜೆಇ (ವಿವಿಧ ವಿಭಾಗಗಳಲ್ಲಿನ), ಕೆಮಿಸ್ಟ್ ಮತ್ತು ಕೆಮಿಕಲ್ ಸೂಪರ್‌ವೈಸರ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆ – 2024ರ ವೇಳಾಪಟ್ಟಿ ಮತ್ತು ಬೆಲ್ ಸಮಯಗಳನ್ನು ಈ ಕೆಳಗೆ ನೀಡಲಾಗಿದೆ.**

**ವೇಳಾಪಟ್ಟಿ**

| ದಿನಾಂಕ : | ದಿನ : | ಸಮಯ : | ವಿಷಯ : | ಅಂಕಗಳು: |
|---|---|---|---|---|
| 18–02–2024 | ಭಾನುವಾರ | ಬೆಳಿಗ್ಗೆ 10.30 ರಿಂದ ಮ. 12.30 ರ ವರೆಗೆ | ಕೆಮಿಕಲ್ ಸೂಪರ್ ವೈಸರ್ & ಅಸಿಸ್ಟೆಂಟ್ ಇಂಜಿನಿಯರ್ (ಸಿವಿಲ್, ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಾನಿಕ್ಸ್,& ಕಮ್ಯುನಿಕೇಶನ್, ಮೆಕ್ಯಾನಿಕಲ್ ಮತ್ತು ಇನಸ್ಟ್ರುಮೆಂಟೇಶನ್) | 100 |
| | | ಮಧ್ಯಾಹ್ನ 02.30 ರಿಂದ 04.30 ರ ವರೆಗೆ | ಕೆಮಿಸ್ಟ್ & ಜೂನಿಯರ್ ಇಂಜಿನಿಯರ್ (ಸಿವಿಲ್, ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಾನಿಕ್ಸ್,& ಕಮ್ಯುನಿಕೇಶನ್, ಮೆಕ್ಯಾನಿಕಲ್ ಮತ್ತು ಆಟೊಮೊಬೈಲ್) | 100 |

## ಪರೀಕ್ಷೆಯ ಬೆಲ್ ಸಮಯ ಮತ್ತು ವಿವರಗಳು

ಈ ಬೆಲ್ ಸಮಯವನ್ನು ಯಾವುದೇ ಬದಲಾವಣೆ ಮಾಡದೆ ಅಥವಾ ದೂರು ಬರದಂತೆ ನಿಖರವಾಗಿ ಅನುಸರಿಸಲು ಸೂಚಿಸಿದೆ.

| ಕ್ರ. ಸಂ | ಬೆಲ್ ಸಂಖ್ಯೆ | ಬೆಳಗಿನ ಅವಧಿ | ಮಧ್ಯಾಹ್ನದ ಅವಧಿ | ವಿವರಗಳು |
|---|---|---|---|---|
| 01 | ಮೊದಲನೇ ಬೆಲ್ | ಬೆ.10.00 | ಮ. 2.00 | • ಪ್ರವೇಶ ಪತ್ರವನ್ನು ಮತ್ತು ಗುರುತಿನ ಚೀಟಿಯನ್ನು ತೋರಿಸಿದರೆ ಮಾತ್ರ ಅಭ್ಯರ್ಥಿಗಳಿಗೆ ಪರೀಕ್ಷೆಯ ಕೊಠಡಿಯನ್ನು ಪ್ರವೇಶಿಸಿ ನಿಗದಿತ ಆಸನದಲ್ಲಿ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗುವುದು.<br>• ಕೊಠಡಿ ಮೇಲ್ವಿಚಾರಕರು ಪ್ರವೇಶ ಪತ್ರದಲ್ಲಿರುವ ಭಾವಚಿತ್ರವನ್ನು ಮತ್ತು ಗುರುತಿನ ಚೀಟಿಯಲ್ಲಿ ಮುದ್ರಿತವಾಗಿರುವ ಭಾವಚಿತ್ರವನ್ನು ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಯೊಂದಿಗೆ ಪರಿಶೀಲಿಸುತ್ತಾರೆ.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಗೆ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ವಿತರಿಸುತ್ತಾರೆ. ಅಭ್ಯರ್ಥಿಗಳು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ತಮ್ಮ ಹೆಸರನ್ನು ಬರೆಯಬೇಕು.<br>• ನಂತರ ಅಭ್ಯರ್ಥಿಗಳು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಎಚ್ಚರದಿಂದ ನೊಂದಣಿ ಸಂಖ್ಯೆಯನ್ನು ಬರೆದು ಸಂಬಂಧಿಸಿದ ವೃತ್ತಗಳನ್ನು ತಪ್ಪದೇ ತುಂಬಬೇಕು. (ಮತ್ತೊಮ್ಮೆ ಪರಿಶೀಲಿಸುವುದು ಸೂಕ್ತ.)<br>• ಅಭ್ಯರ್ಥಿಗಳು ತಾವು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದಿರುವ ನೊಂದಣಿ ಸಂಖ್ಯೆಯನ್ನು, ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ನೊಂದಣಿ ಸಂಖ್ಯೆಗೆ ಅನುಗುಣವಾಗಿದೆಯೆ ಎಂದು ಪರಿಶೀಲಿಸಿಕೊಳ್ಳಬೇಕು. |
| 02 | ಎರಡನೇ ಬೆಲ್ | ಬೆ.10.15 | ಮ. 2.15 | • **ಬೆ.10.20ಕ್ಕೆ / ಮ.2.20** ಕ್ಕೆ ಉಪ ಮುಖ್ಯ ಪರೀಕ್ಷಾ ಅಧೀಕ್ಷಕರು / ಪ್ರಶ್ನೆ ಪತ್ರಿಕಾ ಪಾಲಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕಾ ಲಕೋಟೆಗಳನ್ನು ಕೊಠಡಿ ಮೇಲ್ವಿಚಾರಕರುಗಳಿಗೆ ಅವರುಗಳ ಕೊಠಡಿಗೆ ತಂದು ಕೊಡುತ್ತಾರೆ.<br>• ಕೊಠಡಿ ಮೇಲ್ವಿಚಾರಕರು ಸೀಲ್ ಮಾಡಿರುವ ಪ್ರಶ್ನೆ ಪತ್ರಿಕಾ ಲಕೋಟೆಯನ್ನು ಅಭ್ಯರ್ಥಿಗಳಿಗೆ ತೋರಿಸಿ ಈ ರೀತಿ ಜೋರಾಗಿ ಹೇಳಬೇಕು. **"ಪ್ರಶ್ನೆ ಪತ್ರಿಕೆಗಳನ್ನು ಸೀಲ್ ಮಾಡಿರುವ ಲಕೋಟೆಯಲ್ಲಿ ಇಡಲಾಗಿದೆ ಮತ್ತು ಲಕೋಟೆಯು ಒಡೆದಿರುವುದಿಲ್ಲ".** ನಂತರ ಲಕೋಟೆಯ ಮೇಲೆ ಹಾಜರಿರುವ ಯಾರಾದರೂ ಇಬ್ಬರು ಅಭ್ಯರ್ಥಿಗಳಿಂದ ಸಹಿಯನ್ನು ಪಡೆಯುತ್ತಾರೆ.<br>• ನಂತರ ಕೊಠಡಿ ಮೇಲ್ವಿಚಾರಕರು **ಬೆ. 10.25 ಕ್ಕೆ / ಮ. 2.25ಕ್ಕೆ** ಲಕೋಟೆಯನ್ನು ತೆರೆದು ಕೊಠಡಿಯಲ್ಲಿರುವ ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಯನ್ನು ಸೂಕ್ತ ರೀತಿಯಲ್ಲಿ ವಿತರಿಸುತ್ತಾರೆ.<br>• ಅಭ್ಯರ್ಥಿಗಳು ಪ್ರಶ್ನೆಪತ್ರಿಕೆಯಲ್ಲಿನ ವರ್ಷನ್ ಕೋಡ್ ಮತ್ತು ಕ್ರಮ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿನ ನಿಗದಿತ ಜಾಗದಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ತುಂಬಬೇಕು. ನಂತರ ಅಭ್ಯರ್ಥಿಗಳು ಓಎಂಆರ್‌ನಲ್ಲಿ ನಿಗದಿತ ಜಾಗದಲ್ಲಿ ಸಹಿಯನ್ನು ಹಾಕುತ್ತಾರೆ.<br>**ವಿ.ಸೂ.:** ಪ್ರಶ್ನೆ ಪತ್ರಿಕಾ ಲಕೋಟೆಯನ್ನು ತೆರೆಯಲು ಕೊಠಡಿ ಮೇಲ್ವಿಚಾರಕರು ಮಾತ್ರ ಅಧಿಕಾರವನ್ನು ಹೊಂದಿರುತ್ತಾರೆ. ಕೊಠಡಿ ಮೇಲ್ವಿಚಾರಕರನ್ನು ಹೊರತುಪಡಿಸಿ ಬೇರೆ ಯಾವುದೇ ಅಧಿಕಾರಿ / ಸಿಬ್ಬಂದಿ ವರ್ಗ/ ಉಪ ಮುಖ್ಯ ಪರೀಕ್ಷಾ ಅಧೀಕ್ಷಕರು / ಪ್ರಶ್ನೆ ಪತ್ರಿಕಾ ಪಾಲಕರು / ಅಧ್ಯಕ್ಷರು / ಕಾರ್ಯದರ್ಶಿ / ಆಡಳಿತಾಧಿಕಾರಿ ಮುಂತಾದವರುಗಳು ಪ್ರಶ್ನೆ ಪತ್ರಿಕಾ ಲಕೋಟೆಯನ್ನು ತೆರೆಯಲು ಅಧಿಕಾರವನ್ನು ಹೊಂದಿರುವುದಿಲ್ಲ.<br>• ಮೂರನೇ ಬೆಲ್ ಆಗುವವರೆಗೂ ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಕಿರುಪುಸ್ತಕವನ್ನು ನೋಡಲು ಅಥವಾ ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಉತ್ತರಿಸುವುದಕ್ಕೆ ಅವಕಾಶ ಕೊಡಲಾಗುವುದಿಲ್ಲ.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳ ಸಹಿಯನ್ನು ನಾಮಿನಲ್ ರೋಲ್‌ನಲ್ಲಿ ಪಡೆದು ಮುದ್ರಿತವಾಗಿರುವ ಸಹಿಯನ್ನು ತಾಳೆ ಮಾಡುತ್ತಾರೆ. |
| 03 | ಮೂರನೇ ಬೆಲ್ | ಬೆ.10.30 | ಮ. 2.30 | • ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಯ ಕಿರು ಪುಸ್ತಕವನ್ನು ತೆರೆದು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಅವಕಾಶ ಕೊಡಲಾಗುವುದು.<br>• ಈ ಬೆಲ್ ಅಂದರೆ **ಬೆ.10.30 / ಮ. 2.30** ಆದ ನಂತರ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಲು ಅಥವಾ ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅವಕಾಶವಿರುವುದಿಲ್ಲ. |
| 04 | ನಾಲ್ಕನೇ ಬೆಲ್ | ಬೆ.11.30 | ಮ. 3.30 | • ಇದು ಮೊದಲನೆಯ ಎಚ್ಚರಿಕೆ ಬೆಲ್ – **ಪರೀಕ್ಷೆಯ ಒಂದು ಗಂಟೆಯ ಅವಧಿ ಮುಗಿದಿರುವುದಕ್ಕಾಗಿ** |
| 05 | ಐದನೇ ಬೆಲ್ | ಮ.12.00 | ಸಂ. 4.00 | • ಇದು ಎರಡನೆಯ ಎಚ್ಚರಿಕೆ ಬೆಲ್ – **ಪರೀಕ್ಷೆ ಮುಗಿಯಲು ಮೂವತ್ತು ನಿಮಿಷಗಳು ಬಾಕಿ ಉಳಿದಿರುವುದಕ್ಕಾಗಿ** |
| 06 | ಆರನೇ ಬೆಲ್ | ಬೆ.12.25 | ಮ. 4.25 | • ಇದು ಕೊನೆಯ ಎಚ್ಚರಿಕೆಯ ಬೆಲ್ ಕೊಠಡಿ ಮೇಲ್ವಿಚಾರಕರು **ಅಭ್ಯರ್ಥಿಗಳಿಗೆ ಪರೀಕ್ಷೆ ಮುಗಿಯಲು ಕೇವಲ ಐದು ನಿಮಿಷಗಳು ಬಾಕಿ ಉಳಿದಿವೆ** ಎಂದು ತಿಳಿಸುತ್ತಾರೆ. |
| 07 | ಏಳನೇ ಹಾಗೂ ಕೊನೆಯ ಬೆಲ್ | ಮ.12.30 | ಸಂ. 4.30 | • ಪರೀಕ್ಷೆ ಮುಕ್ತಾಯ.<br>• ಈ ಬೆಲ್ ಆದ ತಕ್ಷಣ ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವುದನ್ನು ನಿಲ್ಲಿಸಿದ್ದಾರೆ ಎಂದು ಖಾತ್ರಿಮಾಡಿಕೊಳ್ಳಬೇಕು.<br>• ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಂದ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಪಡೆಯುವುದು.<br>**ಮುಖ್ಯವಾದುದು:** ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರ ಹೋಗುವುದಕ್ಕೆ ಮೊದಲು ಓ.ಎಂ.ಆರ್ ಉತ್ತರ ಪತ್ರಿಕೆಯನ್ನು ಅಭ್ಯರ್ಥಿಗಳಿಂದ ಪಡೆಯಲಾಗಿದೆಯೇ ಎಂದು ಖಾತ್ರಿ ಮಾಡಿಕೊಳ್ಳಬೇಕು.<br>• ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಉತ್ತರ ಪತ್ರಿಕೆಯ ಮೇಲ್ಭಾಗದ ಹಾಳೆಯನ್ನು (ಕಚೇರಿ ಪ್ರತಿ) ನಿಧಾನವಾಗಿ ತೆಗೆದು ತಮ್ಮೊಡನೆ ಇಟ್ಟುಕೊಳ್ಳಬೇಕು.<br>• ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ಹಾಳೆಯನ್ನು (ಅಭ್ಯರ್ಥಿಯ ಪ್ರತಿ) ಸಂಬಂಧಿಸಿದ ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಯ ಜೊತೆಯಲ್ಲಿ ಹಿಂದಿರುಗಿಸಬೇಕು. |

ಸಹಿ/–

ಕಾರ್ಯನಿರ್ವಾಹಕ ನಿರ್ದೇಶಕರು

ಸೂಚನೆ: ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ಆಧುನಿಕ ಎಲೆಕ್ಟ್ರಾನಿಕ್ ಉಪಕರಣಗಳು, ಕ್ಯಾಲುಕುಲೇಟರ್, ಮೊಬೈಲ್ ಫೋನ್, ಬ್ಲೂಟೂಥ್ ಇತ್ಯಾದಿಗಳನ್ನು ತರುವುದನ್ನು ನಿಷೇದಿಸಲಾಗಿದೆ.

ಗಮನಿಸಿ: ಪರೀಕ್ಷಾ ಕರ್ತವ್ಯದಲ್ಲಿ ನಿರತರಾಗಿರುವ ಅಧಿಕಾರಿಗಳು ನೀಡುವ ಎಲ್ಲಾ ಸೂಚನೆಗಳನ್ನು ಅಭ್ಯರ್ಥಿಗಳು ತಪ್ಪದೇ ಪಾಲಿಸಬೇಕು. ಸೂಚನೆಗಳನ್ನು ಪಾಲಿಸದೇ ಇರುವ ಅಭ್ಯರ್ಥಿಗಳನ್ನು ದುಷ್ಕೃತ್ಯದ ವಿಧಾನವೆಂದು ಪರಿಗಣಿಸಲಾಗುವುದು; ಹಾಗು ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಈ ಕೆಳಕಂಡ ರೀತಿಯ ತಪ್ಪುಗಳನ್ನು ಎಸಗಿದಲ್ಲಿ; ಅಂತಹ ಅಭ್ಯರ್ಥಿಗಳ ವಿರುದ್ಧ ಶಿಸ್ತು ಕ್ರಮ / ಅಪರಾಧ ಮೊಕದ್ದಮೆಯನ್ನು ಹೂಡಲಾಗುವುದು: ಗಲಾಟೆ ಮಾಡಿದರೆ / ನಿಶ್ಯಬ್ಧತೆಯನ್ನು ಕಾಪಾಡದಿದ್ದರೆ; ಪರೀಕ್ಷಾ ಸಮಯದಲ್ಲಿ ವಿಷಯಕ್ಕೆ ಸಂಬಂಧಿಸಿದ ಪುಸ್ತಕ, ಚೀಟಿ ಇತ್ಯಾದಿಗಳನ್ನು ಬಳಸಿದರೆ; ಬೇರೆ ಅಭ್ಯರ್ಥಿಗಳ ಜೊತೆ ಮಾತನಾಡುವುದು ಅಥವಾ ಸಂಜ್ಞೆ ಮಾಡುವುದು; ಅಭ್ಯರ್ಥಿಯು ಬೇರೆ ಅಭ್ಯರ್ಥಿಗಳ ಉತ್ತರ ಪತ್ರಿಕೆಯಿಂದ ಅಥವಾ ಇನ್ನಾವುದೇ ಮೂಲಗಳಿಂದ ನಕಲು ಮಾಡುತ್ತಿದ್ದರೆ; ಅಭ್ಯರ್ಥಿಯು ತನ್ನ ಉತ್ತರ ಪತ್ರಿಕೆ ಬೇರೆ ಕಡೆ ವರ್ಗಾಯಿಸಿದರೆ; ಬದಲಿ ಅಭ್ಯರ್ಥಿಯಾಗಿದ್ದರೆ; ಪರೀಕ್ಷಾ ಅವಧಿಯಲ್ಲಿ ಅಥವಾ ಪರೀಕ್ಷೆಯ ನಂತರ ಉತ್ತರ ಪತ್ರಿಕೆಯನ್ನು ಪರೀಕ್ಷಾ ಕೊಠಡಿಯಿಂದ ಹೊರಗಡೆ ತೆಗೆದುಕೊಂಡು ಹೋದಲ್ಲಿ; ಉತ್ತರ ಪತ್ರಿಕೆಯನ್ನು ಹರಿದು ಹಾಕುವುದು ಅಥವಾ ಇನ್ನಾವುದೇ ಪರೀಕ್ಷಾ ಅವ್ಯವಹಾರಗಳು ಕಂಡು ಬಂದಲ್ಲಿ.